

### ಕಾಲುನೋವು-ತಲೆನೋವು

ಹೆಂಡತಿ: ರೀ ಕಾಲುನೋವು ಅಂತ ಹೇಳ್ತಾ ಇದ್ರಲ್ಲ ಆಸ್ಪತ್ರೆಗೆ ಹೋಗಿ ಬಂದ್ರಾ?
ಗುಂಡ: ಹೂಂ ಕಣೆ ಹೋಗಿ ಬಂದೆ.
ಹೆಂಡತಿ: ಅರೆ ಮೊದಲೇ ಹೇಳಿದ್ರೆ ನಾನು ನಿಮ್ಮ ಜೊತೆ ಬರ್ತಾ ಇದ್ದೆ.
ಗುಂಡ: ಅಯ್ಯೋ ಸುಮ್ಮನಿರೆ! ಕಾಲು ನೋವಿನ ಜೊತೆ ತಲೆನೋವು ಯಾಕಂತ ನಾನೊಬ್ಬನೇ ಹೋಗಿ ಬಂದೆ!

★★★

### ಸತ್ಯ ಹೇಳಲು ಕುಡಿದೆ!

ನ್ಯಾಯಾಧೀಶ: ಕುಡಿದು ಬಂದಿದ್ದೀಯಾ?
ಸಾಕ್ಷಿದಾರ: ಹೌದು ಮಹಾಸ್ವಾಮಿ.
ನ್ಯಾಯಾಧೀಶ: ಯಾಕೆ?
ಸಾಕ್ಷಿದಾರ: ಸತ್ಯ ಹೇಳಬೇಕು ಅಂತಿರಲ್ಲ.

★★★

### ಕಾಮಿನಿ ಮೂರು ದಿನ ರಜೆ!

ಹೆಂಡತಿ: ರೀ ಬ್ಯಾಂಕಿಗೆ ಹೋಗಿ ಹಣ ಡ್ರಾ ಮಾಡಿಕೊಂಡು ಬನ್ನಿ ಅಂದ್ರೆ ಯಾಕ್ರೀ ಹೋಗದೆ ಡ್ರಾಮಾ ಮಾಡ್ತಾ ಇದೀರಾ?
ಗುಂಡ: ಬ್ಯಾಂಕಿನ ಕ್ಲಾರ್ಕು ಕಾಮಿನಿ ಮೂರು ದಿನ ರಜಾ ಅಂತೆ. ಆಮೇಲೆ ಹೋಗಿ ತರ್ತೀನಿ.

★★★

### ಎರಡು ಸಾವಿರ ನೋಟು ಹರಿದೆ!

ಗುಂಡ: ಕುಡಿದಾಗ ಹಣ ಡ್ರಾ ಮಾಡಲು ಎಟಿಎಂಗೆ ಮಾತ್ರ ಹೋಗಬಾರದು.
ಗೆಳೆಯ: ಅಯ್ಯೋ ಯಾಕೆ?
ಗುಂಡ: ನಿನ್ನೆ ರಾತ್ರಿ ಕುಡಿದು ಎರಡು ಸಾವಿರ ರೂಪಾಯಿ ಡ್ರಾ ಮಾಡಿ ಅದನ್ನು ಹರಿದು ಹಾಕಿ ರಿಸಿಪ್ಟನ್ನು ಜೇಬಿನಲ್ಲಿ ಇಟ್ಟುಕೊಂಡು ಬಂದಿದ್ದೇನೆ.

★★★



### ನೀವು ಅತ್ತೆ ಆಗಿರ್ತಿದ್ರಿ!

ಶಿಕ್ಷಕಿ: ಒಳ್ಳೆಯ ಮನಸ್ಸಿನಿಂದ ದೇವರನ್ನು ಬೇಡಿಕೊಂಡರೆ ಅಂದುಕೊಂಡಿದ್ದೆಲ್ಲಾ ನಿಜ ಆಗುತ್ತದಂತೆ.
ಗುಂಡ: ಇಲ್ಲ ಮಿಸ್ ಅದೆಲ್ಲಾ ಸುಳ್ಳು! ಹಾಗೆ ಅದು ನಿಜ ಆಗೋಹಾಗಿದ್ರೆ ಇಷ್ಟು ಹೊತ್ತಿಗೆ ನೀವು ನನ್ನ ಅತ್ತೆ ಆಗಿರ್ತಾ ಇದ್ರಿ.

### ಎಮ್ಮೆ ಕಾಣಿಸಿತೆ?

ಗುಂಡ: ಲೇ ರಾಣಿ ನಿನ್ನ ಕಣ್ಣುಗಳಲ್ಲಿ ನನಗೆ ಇಡೀ ಪ್ರಪಂಚವೇ ಕಾಣಿಸುತ್ತಿದೆ.
ಪಾರ್ವತಿ: ಹೌದಾ? ಹಾಗಾದರೆ ನಿನ್ನೆಯಿಂದ ನಮ್ಮ ಎಮ್ಮೆ ಕಾಣಿಸುತ್ತಿಲ್ಲ. ನಿನಗೆ ಕಂಡರೆ ಕೂಡಲೆ ತಿಳಿಸು ಮಾರಾಯ.

★★★

### ಮಹಾಭಾರತ ನಡೆಯುತ್ತಿದೆ!

ಟೀಚರ್: ಲೋ ಗುಂಡ ನಾಳೆಯಿಂದ ನೀನು ಪ್ರತಿದಿನ ನಿಮ್ಮ ಮನೆಯಲ್ಲಿ ರಾಮಾಯಣ ಓದಬೇಕು.
ಗುಂಡ: ಅದು ಮಾತ್ರ ಸಾಧ್ಯವಿಲ್ಲ ಮಿಸ್.
ಟೀಚರ್: ಯಾಕೋ ಸಾಧ್ಯವಿಲ್ಲ?
ಗುಂಡ: ಯಾಕೆಂದರೆ ನಮ್ಮ ಮನೆಯಲ್ಲಿ ಪ್ರತಿದಿನವೂ ಮಹಾಭಾರತ ನಡೆಯುತ್ತಿರುತ್ತದೆ.

★★★

### ಬಾರ್‌ಗೆ ಹೋಗುತ್ತಾಳೆ!

ಗುಂಡ: ಸಾರ್ ನನ್ನ ಹೆಂಡತಿ ಪ್ರತಿದಿನ ರಾತ್ರಿ ಒಂದು ಬಾರ್‌ನಿಂದ ಇನ್ನೊಂದು ಬಾರ್‌ಗೆ ಓಡಾಡುತ್ತಿರುತ್ತಾಳೆ. ಅವಳ ಜೊತೆ ಸಂಸಾರ ಮಾಡೋದು ತುಂಬಾ ಕಷ್ಟ ಆಗ್ತಾ ಇದೆ. ದಯವಿಟ್ಟು ಡೈವೋರ್ಸ್ ಕೊಡಿಸಿ ಸಾರ್.
ವಕೀಲ: ಸರಿ ಆಯಿತು. ಆದರೆ ಅವರು ಯಾಕೆ ಹಾಗೆ ಹೋಗ್ತಾರೆ?
ಗುಂಡ: ನಾನು ಯಾವ ಬಾರ್‌ನಲ್ಲಿ ಕುಡಿದು ಬಿದ್ದಿರುತ್ತೇನೆ ಅಂತ ನೋಡಲು.

★★★

### ಹೀಗೆ ಪರಿಕ್ಷೀಸಿ!

ಗೆಳೆಯ: ಗಂಡು ಹುಡುಗರು ಮದುವೆ ಆಗಿದ್ದಾರಾ ಇಲ್ಲವಾ ಅಂತ ಕಂಡುಹಿಡಿಯುವುದು ಹೇಗೆ?
ಗುಂಡ: ಬೀದಿಯಲ್ಲಿ ಓಡಾಡುವ ಹುಡುಗಿಯರನ್ನು ಆಸೆಯಿಂದ ನೋಡುವವನು ಅವಿವಾಹಿತ. ನಿರಾಸೆಯಿಂದ ನೋಡುವವನು ವಿವಾಹಿತ.

★★★

### ಬಲವಾಗಿ ಎಳೆಯಿರಿ

ಗುಂಡ: ಒಂದು ಬಾಳೆಹಣ್ಣಿಗೆ ಎಷ್ಟು?
ವ್ಯಾಪಾರಿ: ಐದು ರೂಪಾಯಿ.
ಗುಂಡ: ಏನು ಇಷ್ಟು ಚಿಕ್ಕ ಬಾಳೆಹಣ್ಣಿಗೆ ಐದು ರೂಪಾಯಿಯಾ? ಒಂದು ರೂಪಾಯಿಗೆ ಕೊಡಿ.
ವ್ಯಾಪಾರಿ: ಒಂದು ರೂಪಾಯಿಗೆ ಬರೋಲ್ಲ.
ಗುಂಡ: ಯಾಕೆ ಬರೋಲ್ಲ. ಬಲವಾಗಿ ಹಿಡಿದು ಎಳೆಯಿರಿ ಬಂದೇ ಬರುತ್ತೆ.

(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು


ಸಂಧಿಲಿನ್
SANDHILIN सन्धिलिन

ಗಂಟು ನೋವು, ಬೆನ್ನು ನೋವು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ

ನೋವಿಗೆ ಶೀಘ್ರ ಪರಿಣಾಮಕಾರಿ

CLINICALLY PROVED




◆ ಜಿಡ್ಡು ರಹಿತ 'ಸಂಧಿಲಿನ್' ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
◆ ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
◆ ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM AYURVEDA PHARMACY
ISO / GMP CERTIFIED

ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com

ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ.